## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1117
2. ಮಾನ್ಯ ಸದಸ್ಯರ ಹೆಸರು : ಶ್ರೀ ಸುನಿಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 16.12.2025
4. ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ನಡೆಯುತ್ತಿರುವ ಕಬ್ಬು ಬೆಳೆಗಾರರ ಹೋರಾಟದ ಕುರಿತು ಸರ್ಕಾರದ ಗಮನದಲ್ಲಿಯೇ; ಇದ್ದಲ್ಲಿ, ರೈತರು ಕೇಳುತ್ತಿರುವ ನ್ಯಾಯಯುತ ಬೆಲೆ ನೀಡುವಲ್ಲಿ ಕಾರ್ಖಾನೆಗಳು ರೈತರಿಗೆ ಸತಾಯಿಸುತ್ತಿರುವುದು ಸರಿಯೇ; (ಮಾಹಿತಿ ನೀಡುವುದು) | ಕೇಂದ್ರ ಸರ್ಕಾರವು ಕಬ್ಬಿಗೆ ನಿಗದಿಪಡಿಸಿರುವ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯು ಅವೈಜ್ಞಾನಿಕವಾಗಿದ್ದು, ರೈತರು ಬೆಳೆದ ಕಬ್ಬಿಗೆ ಸರಿಯಾದ ಬೆಲೆ ಸಿಗುತ್ತಿಲ್ಲವೆಂದು ಮತ್ತು ಉತ್ಪಾದನೆಗೆ ಆಗುವ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳದೇ ಇಳುವರಿ (Recovery) ಆಧಾರದ ಮೇಲೆ ಬೆಲೆ ನಿರ್ಧಾರವಾಗುತ್ತಿರುವುದರಿಂದ ಇಳುವರಿ ವರದಿಯು ಕೂಡ ಪಾರದರ್ಶಕವಾಗಿಲ್ಲವೆಂದು, ರೈತರಿಗೆ ಕಬ್ಬಿನ ದರದಲ್ಲಿ ವ್ಯತ್ಯಾಸವಾಗುತ್ತಿದ್ದು ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ಎಫ್‌ಆರ್‌ಪಿ ದರವನ್ನು ಒಪ್ಪಲು ಸಾಧ್ಯವಿಲ್ಲವೆಂದು, ಈ ಹಿನ್ನೆಲೆಯಲ್ಲಿ ಪ್ರಸಕ್ತ 2025-26 ನೇ ಹಂಗಾಮಿಗೆ ಪ್ರತಿ ಮೆ.ಟನ್ ಕಬ್ಬಿಗೆ ರೂ.3500/- ಗಳನ್ನು (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚ ಹೊರತುಪಡಿಸಿ) ನಿಗಧಿಪಡಿಸುವಂತೆ ಒತ್ತಾಯಿಸಿ ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಗುರ್ಲಾಪುರ ಕ್ರಾಸ್ ಬಳಿ ಮತ್ತು ರಾಜ್ಯದ ಉತ್ತರ ಭಾಗದ ಹಾವೇರಿ, ಬಾಗಲಕೋಟೆ, ವಿಜಯಪುರ, ಕಲಬುರಗಿ, ಯಾದಗಿರಿ ಮತ್ತು ಬೀದರ್ ಜಿಲ್ಲೆಗಳಲ್ಲಿ ರೈತ ಸಂಘಟನೆಗಳು ಪ್ರತಿಭಟನೆಗಳನ್ನು ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ರೈತರ ಬೇಡಿಕೆಗಳ ಹಿನ್ನೆಲೆಯಲ್ಲಿ, ದಿನಾಂಕ:07.11.2025ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳ ಮಾಲೀಕರು / ಪ್ರತಿನಿಧಿಗಳೊಂದಿಗೆ ಮತ್ತು ರಾಜ್ಯದ ಕಬ್ಬು ಬೆಳೆಗಾರರು ಹಾಗೂ ರೈತ ಸಂಘಟನೆಗಳ ಮುಖಂಡರು ಮತ್ತು ಪ್ರತಿನಿಧಿಗಳೊಂದಿಗೆ ಸುಧೀರ್ಘವಾಗಿ ಸಭೆಯನ್ನು ಜರುಗಿಸಲಾಗಿರುತ್ತದೆ. ಸದರಿ ಸಭೆಯಲ್ಲಿ ತೀರ್ಮಾನಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ:ಸಿಐ 324 ಎಸ್‌ಜಿಎಫ್ 2025, ದಿನಾಂಕ:08.11.2025ರಲ್ಲಿ, 2025-26ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಸಂಬಂಧಿಸಿದ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ಕನಿಷ್ಠ ಹೆಚ್ಚುವರಿ ಕಬ್ಬು ಬೆಲೆಯನ್ನು ನಿಗದಿಪಡಿಸಲು ಹಾಗೂ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವನ್ನು ಒಂದು ಬಾರಿಯ ಕ್ರಮವಾಗಿ ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಲಾಗಿರುತ್ತದೆ. |

| ಇಳುವರಿ | ಎಫ್.ಆರ್.ಪಿ (ಪ್ರತಿ ಮೆ.ಟನ್) (ಕಬ್ಬು ಕಟಾವು ಮತ್ತು ಸಾಗಾಣಿಕ ವೆಚ್ಚವನ್ನು ಒಳಗೊಂಡಂತೆ) (ರೂ.ಗಳಲ್ಲಿ) | ಸಕ್ಕರೆ ಕಾರ್ಖಾನೆಗಳು ಮೊದಲಿನ ಕಂತಿನಲ್ಲಿ ರೈತರಿಗೆ ನೀಡಲು ಒಪ್ಪಿರುವ ಮೊತ್ತ ರೂ.ಗಳಲ್ಲಿ (ಪ್ರತಿ ಮೆ.ಟನ್ ಗೆ) (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಹೊರತುಪಡಿಸಿ ) | ಎರಡನೇ ಕಂತಿನಲ್ಲಿ ಪಾವತಿಸಬೇಕಾದ ಮೊತ್ತ (ರೂ.ಗಳಲ್ಲಿ) | | | ಒಟ್ಟು ಮೊತ್ತ (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಹೊರತುಪಡಿಸಿ) (ರೂ.ಗಳಲ್ಲಿ) |
|---|---|---|---|---|---|---|
| | | | ಸಕ್ಕರೆ ಕಾರ್ಖಾನೆಗಳು | ರಾಜ್ಯ ಸರ್ಕಾರ | ಒಟ್ಟು | |
| 1 | 2 | 3 | 4 | 5 | 6 | 7 (3+6) |
| 9.5% ಅಥವಾ ಕಡಿಮೆ | 3290.5 | ಕೇಂದ್ರ ಸರ್ಕಾರದ ಎಫ್.ಆರ್.ಪಿ ದರದನ್ವಯ ರೈತರಿಗೆ ನೀಡಲು ಒಪ್ಪಿರುವ ಮೊತ್ತ | 50 | 50 | 100 | ಕಾಲಂ 3 ರಲ್ಲಿನ ಮೊತ್ತಕ್ಕೆ ಎರಡನೇ ಕಂತಿನ ರೂ.100.00 ಗಳನ್ನು ಸೇರಿಸಿ ರೈತರಿಗೆ ನೀಡಬೇಕಾದ ಮೊತ್ತ |
| 10.25% | 3550 | 3100 | 50 | 50 | 100 | 3200.00 |
| 11.25% | 3896 | 3200 | 50 | 50 | 100 | 3300.00 |

* 10.25 - 9.5 % ಸಕ್ಕರೆ ಇಳುವರಿ ಪ್ರಮಾಣ ನಡುವೆ ಪ್ರತಿ 0.1 % ಕಡಿಮೆ ಸಕ್ಕರ ಇಳುವರಿಗೆ ಅನುಪಾತಕ್ಕೆ ಅನುಗುಣವಾಗಿ ರೂ.3.46 ಮೊತ್ತವನ್ನು ಪ್ರತಿ ಕ್ವಿಂಟಾಲ್‌ಗೆ ಪರಿಗಣಿಸುವುದು.

* 11.25 - 10.25 % ಸಕ್ಕರೆ ಇಳುವರಿ ಪ್ರಮಾಣದ ನಡುವೆ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ ಪ್ರತಿ 0.1 % ಕಡಿಮೆ ಸಕ್ಕರೆ ಇಳುವರಿಗೆ ಅನುಪಾತಕ್ಕೆ ಅನುಗುಣವಾಗಿ ರೂ.1.00 ಮೊತ್ತವನ್ನು ಪ್ರತಿ ಕ್ವಿಂಟಾಲ್‌ಗೆ ಪರಿಗಣಿಸುವುದು.

ಸದರಿ ಆದೇಶದಲ್ಲಿ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿಯಾಗಿ ಪ್ರತಿ ಮೆ.ಟನ್ ಕಬ್ಬಿಗೆ ರೂ.50/- ಪಾವತಿಸಬೇಕೆಂದು ಹಾಗೂ ರಾಜ್ಯ ಸರ್ಕಾರದ ವತಿಯಿಂದ ಹೆಚ್ಚುವರಿಯಾಗಿ ಪ್ರತಿ ಮೆ.ಟನ್ ಕಬ್ಬಿಗೆ ರೂ.50/- ಬೆಲೆಯನ್ನು ಹೀಗೆ ಒಟ್ಟು ರೂ.100/-ಗಳನ್ನು ಪ್ರತಿ ಮೆ.ಟನ್ ಒಂದಕ್ಕೆ ಹೆಚ್ಚುವರಿ ಕಬ್ಬಿನ ಬಿಲ್ಲನ್ನು ಘೋಷಿಸಲಾಗಿದೆ. ಸದರಿ ಆದೇಶವನ್ನು ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಪಾಲಿಸಲು ಸೂಚಿಸಲಾಗಿದೆ.

| | | |
|---|---|---|
| (ಆ) | ರಾಜ್ಯದ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಕಾರ್ಖಾನೆಯವರು ಕಬ್ಬಿಗೆ ಎಷ್ಟು ದರ ನಿಗಧಿಪಡಿಸಿರುತ್ತಾರೆ ಹಾಗೂ ದರ ನಿಗಧಿಯಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ಇರುವ ವ್ಯತ್ಯಾಸಕ್ಕೆ ಕಾರಣವೇನು; | ಭಾರತ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯು 2025-26ನೇ ಸಕ್ಕರೆ ಹಂಗಾಮಿನಲ್ಲಿ ಕಬ್ಬಿಗೆ ನಿಗದಿಪಡಿಸಿರುವ ಎಫ್.ಆರ್.ಪಿ. ಮಾರ್ಗಸೂಚಿ ದರಗಳನ್ನು ಮತ್ತು ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ 2024-25ನೇ ಹಂಗಾಮಿನಲ್ಲಿ ಲಭ್ಯವಾದ ಸಕ್ಕರೆ ಇಳುವರಿಯನ್ನು ಆಧರಿಸಿ 2025-26ನೇ ಹಂಗಾಮಿನಲ್ಲಿ ರಾಜ್ಯದ ಪ್ರತಿಯೊಂದು ಸಕ್ಕರೆ ಕಾರ್ಖಾನೆಗಳು ರೈತರಿಗೆ ಪಾವತಿಸಬೇಕಾದ ಕಬ್ಬಿನ ಬೆಲೆಯ ಕುರಿತು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಆದೇಶ ಸಂಖ್ಯೆ: ಡಿಎಸ್‌ಕೆ/ಎಸ್‌ಟಿಟಿ/01/2025-26, ದಿನಾಂಕ: 15.09.2025ರಲ್ಲಿ ಆದೇಶಿಸಲಾಗಿರುತ್ತದೆ. ಸದರಿ ಆದೇಶದ ಪ್ರತಿಯನ್ನು **ಅನುಬಂಧ-1 ರಲ್ಲಿ** ಒದಗಿಸಿದೆ. |

| | | |
|---|---|---|
| | | ಭಾರತ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯು ಕಬ್ಬಿಗೆ ನಿಗದಿಪಡಿಸುವ ಎಫ್.ಆರ್.ಪಿ. ಮಾರ್ಗಸೂಚಿ ದರಗಳು ಸಕ್ಕರೆ ಇಳುವರಿಯನ್ನು ಆಧರಿಸಿರುವುದರಿಂದ, ಕಬ್ಬಿಗೆ ನಿಗದಿಪಡಿಸುವ ದರಗಳು ಕಾರ್ಖಾನೆಯಿಂದ ಕಾರ್ಖಾನೆಗೆ, ಜಿಲ್ಲೆಯಿಂದ ಜಿಲ್ಲೆಗೆ ವ್ಯತ್ಯಾಸವಿರುತ್ತವೆ. |
| (ಇ) | ಈ ತರಹದ ಅನ್ಯಾಯದ ದರ ನಿಗದಿಯಿಂದ ಹಾಗೂ ಇಳುವರಿ ಕಡಿಮೆ ಎಂಬ ಮೋಸದಾಟದಿಂದ ರೈತರಿಗೆ ಅನ್ಯಾಯವಾಗುತ್ತಿದ್ದು, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಯ ಪ್ರತಿ ಟನ್ ಕಬ್ಬಿಗೆ 3300 ದರ ನಿಗದಿಪಡಿಸಿ ಪಕ್ಕದ ವಿಜಯಪುರ ಮತ್ತು ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಬೆಳೆದ ಕಬ್ಬಿಗೆ 2900 ರಿಂದ 3000 ರೂ ದರ ನಿಗದಿ ಮಾಡಿರುವ ಕಾರ್ಖಾನೆಗಳ ನಿಲುವ ಸರಿಯೇ; (ಮಾಹಿತಿ ನೀಡುವುದು) | ಕಬ್ಬಿನಿಂದ ಲಭ್ಯವಾಗುವ ಸಕ್ಕರೆ ಇಳುವರಿಯು ಆಯಾ ಭಾಗದಲ್ಲಿನ ನೀರಾವರಿ ಸೌಲಭ್ಯಗಳು, ಮಣ್ಣಿನ ಫಲವತ್ತತೆ, ಕಬ್ಬಿನ ತಳಿಗಳು, ಹವಾಗುಣ, ಮಳೆಯ ಪ್ರಮಾಣ, ಕಾರ್ಖಾನೆಗಳಲ್ಲಿ ಅಳವಡಿಸಿಕೊಂಡಿರುವ ಆಧುನಿಕ ತಂತ್ರಜ್ಞಾನ, ಕಾರ್ಖಾನೆಯ ಯಂತ್ರೋಪಕರಣಗಳ ಆಯುಷ್ಯ ಸೇರಿದಂತೆ ಇತ್ಯಾದಿ ಅಂಶಗಳನ್ನು ಅವಲಂಬಿಸಿರುತ್ತದೆ.<br>ಕೃಷ್ಣಾ ನದಿ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳಲ್ಲಿ ಬರುವ ಸಕ್ಕರೆ ಕಾರ್ಖಾನೆಗಳಲ್ಲಿನ ಸಕ್ಕರೆ ಇಳುವರಿಯು, ಭೀಮಾ ನದಿ ಪಾತ್ರದಲ್ಲಿ ಬರುವ ವಿಜಯಪುರ, ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳಿಗೆ ಹೋಲಿಸಿದಲ್ಲಿ, ಹೆಚ್ಚಿಗೆ ಇರುತ್ತದೆ. ಭಾರತ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯು ಕಬ್ಬಿಗೆ ನಿಗದಿಪಡಿಸುವ ಎಫ್.ಆರ್.ಪಿ. ಮಾರ್ಗಸೂಚಿ ದರಗಳು ಸಕ್ಕರೆ ಇಳುವರಿಯನ್ನು ಆಧರಿಸಿರುವುದರಿಂದ, ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳು ಇತರೆ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳಿಗೆ ಹೋಲಿಸಿದಲ್ಲಿ ಹೆಚ್ಚಿನ ಕಬ್ಬಿನ ಬೆಲೆಯನ್ನು ಪಾವತಿಸುತ್ತಿವೆ. |
| (ಈ) | ಈ ಕಾರ್ಖಾನೆಗಳು ಜಿಲ್ಲಾಡಳಿತದ ಮಾತಿಗೂ ಗೌರವ ನೀಡದೇ ಏಕಪಕ್ಷೀಯವಾಗಿ ದರ ನಿಗದಿ ಮಾಡಿ ಕಾರ್ಖಾನೆ ಆರಂಭ ಮಾಡುತ್ತಿದ್ದು, ಅಂತಹ ಕಾರ್ಖಾನೆಗಳ ಮೇಲೆ ಸರ್ಕಾರ ಸಹಾನುಭೂತಿಗೆ ಕಾರಣವೇನು; | ಕೇಂದ್ರ ಸರ್ಕಾರವು ಕಬ್ಬು (ನಿಯಂತ್ರಣ) ಆದೇಶ 1966ರ ಖಂಡ 3(1)ರನ್ವಯ ದೇಶಾದ್ಯಂತ ಕಬ್ಬಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (ಎಫ್.ಆರ್.ಪಿ) ನಿಗದಿ ಮಾಡುವ ಸಕ್ಷಮ ಪ್ರಾಧಿಕಾರವಾಗಿರುತ್ತದೆ. ಅದರಂತೆ, ಕೇಂದ್ರ ಕೃಷಿ ಬೆಲೆ ಮತ್ತು ವೆಚ್ಚ ಆಯೋಗವು (ಸಿ.ಎ.ಸಿ.ಪಿ) ಮಾಡುವ ಶಿಫಾರಸ್ಸುಗಳನ್ನು ಆಧರಿಸಿ, ಭಾರತ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯು ಮುಂಬರುವ ಸಕ್ಕರೆ ಹಂಗಾಮಿನಲ್ಲಿ ರೈತರು ಸರಬರಾಜು ಮಾಡುವ ಕಬ್ಬಿಗೆ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯ (ಎಫ್.ಆರ್.ಪಿ) ಕುರಿತು ಮಾರ್ಗಸೂಚಿ ದರಗಳನ್ನು ನಿಗದಿಪಡಿಸುತ್ತದೆ. ಸದರಿ ಎಫ್.ಆರ್.ಪಿ. ಮಾರ್ಗಸೂಚಿ ದರಗಳು ಏಕರೂಪವಾಗಿ ಇಡೀ ದೇಶಕ್ಕೆ ಅನ್ವಯವಾಗುತ್ತವೆ.<br>2025-26ನೇ ಸಕ್ಕರೆ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳು ರೈತರ ಕಬ್ಬಿಗೆ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ಭಾರತ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯ ಪತ್ರ ಸಂಖ್ಯೆ:No.3(1)/2024-SP-I, Dated:06.05.2025 ರಲ್ಲಿ ಮಾರ್ಗಸೂಚಿಗಳನ್ನು |

| | | |
|---|---|---|
| | | ನಿಗದಿಪಡಿಸಲಾಗಿದ್ದು, ಸದರಿ ಮಾರ್ಗಸೂಚಿಗಳಲ್ಲಿ ಕಬ್ಬಿಗೆ ನಿಗದಿಪಡಿಸಿದ ಬೆಲೆಗಿಂತ ಹೆಚ್ಚಿನ ಬೆಲೆಯನ್ನು ನಿಗದಿ ಮಾಡುವ ಕುರಿತು ಸಕ್ಕರೆ ಕಾರ್ಖಾನೆಗಳ ಮಾಲೀಕರು / ಪ್ರತಿನಿಧಿಗಳೊಂದಿಗೆ ದರ ಸಂಧಾನವನ್ನು ಮಾಡಬಹುದಾಗಿರುತ್ತದೆ. ಆದರೆ, ಕಬ್ಬಿಗೆ ದರ ನಿಗದಿ ಮಾಡುವ ಕುರಿತು ರಾಜ್ಯ ಸರ್ಕಾರವು ಏಕಪಕ್ಷೀಯವಾಗಿ ನಿರ್ಧಾರ / ನಿರ್ಣಯವನ್ನು ತೆಗೆದುಕೊಳ್ಳಲು ಕಬ್ಬು (ನಿಯಂತ್ರಣ) ಆದೇಶ 1966 ಮತ್ತು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ 2013 ಮತ್ತು ತಿದ್ದುಪಡಿ ಅಧಿನಿಯಮ 2014ರಲ್ಲಿ ಅವಕಾಶವಿರುವುದಿಲ್ಲ. ಮಾನ್ಯ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳು ಕಲಬುರಗಿ ಇವರು ಕಲಬುರಗಿ ಜಿಲ್ಲೆಯ ಪ್ರಮುಖ ರೈತ ಮುಖಂಡರು ಮತ್ತು ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ ಮಾಲೀಕರುಗಳ ಜೊತೆ ಸಮಾಲೋಚಿಸಿ ಕಲಬುರಗಿ ಜಿಲ್ಲೆಯ ಎಲ್ಲಾ ಸಕ್ಕರೆ ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ ರೂ.2900+50=2950/-ಗಳ ಏಕರೂಪ ದರ ಪಾವತಿಸುವುದು ಎಂದು ನಿಗಧಿಪಡಿಸಲಾಗಿರುವುದಾಗಿ ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ ಇವರು ವರದಿಯನ್ನು ನೀಡಿರುತ್ತಾರೆ ಮತ್ತು ರಾಜ್ಯ ಸರ್ಕಾರದಿಂದ ಪ್ರತಿ ಮೆ.ಟನ್ ಒಂದಕ್ಕೆ ರೂ.50.00 ಗಳನ್ನು ಹೆಚ್ಚುವರಿಯಾಗಿ ಪಾವತಿಸುವುದರಿಂದ ಪ್ರತಿ ಮೆ.ಟನ್ ಒಂದಕ್ಕೆ ರೂ.3000.00 ಗಳಷ್ಟು ಬೆಲೆ ಸಿಗಲಿದೆ. |
| (ಉ) | ಕಬ್ಬಿನಿಂದ ತಯಾರಾಗುವ ಸಕ್ಕರೆ ಹೊರತುಪಡಿಸಿ ಇತರೆ ಉಪ ಉತ್ಪನ್ನಗಳ ಲಾಭದಲ್ಲಿ ಕೂಡಾ ಪಾಲು ನೀಡದೇ ರೈತರಿಗೆ ವಂಚಿಸುತ್ತಿದ್ದು, ತಕ್ಷಣವೇ ಸರ್ಕಾರ ಮಧ್ಯಪ್ರದೇಶ ಮಾಡಿ ಅಂತಹ ಸಕ್ಕರೆ ಕಾರ್ಖಾನೆಗಳ ಮೇಲೆ ಸೂಕ್ತ ಕ್ರಮ ಕೈಗೊಂಡು ರೈತರಿಗೆ ನ್ಯಾಯಯುತ ಬೆಲೆ ಕೊಡಿಸಲು ಕ್ರಮ ವಹಿಸುವುದೇ? | ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2014ರ ಕಲಂ 4ಡಿ ಅನ್ವಯ " ಒಪ್ಪಿಸಲಾದ ಕಬ್ಬಿನ ದಾಖಲಿಸಲಾದ ತೂಕ, ಅರೆದ ಕಬ್ಬಿನಿಂದ ವಾಸ್ತವವಾಗಿ ಪ್ರಾಪ್ತವಾದ ಆದಾಯದ ಮತ್ತು ಸಕ್ಕರೆ ಉತ್ಪಾದನೆ ಹಾಗೂ ಅದರ ಉಪ ಉತ್ಪತ್ತಿಗಳಾದ ಕಬ್ಬಿನ ಸಿಪ್ಪೆ, ಕಾಕಂಬಿ, ಪ್ರೆಸ್-ಮಡ್ ಮತ್ತು ಯಾವುದೇ ಇತರ ಉತ್ಪನ್ನದ ಉತ್ಪಾದನೆಗಾಗಿ ನೇರವಾಗಿ ಬಳಸಲಾದ ಕಬ್ಬಿನ ರಸ, ಯಾವುದಾದರೂ ಇದ್ದಲ್ಲಿ ಅವುಗಳನ್ನು ಮಾರಾಟ ಮಾಡಿರದಿದ್ದಾಗ್ಯೂ, ಮಾರಾಟಗಳು ಪ್ರಾರಂಭದ ಮತ್ತು ಮುಕ್ತಾಯದ ದಾಸ್ತಾನನ್ನು ಪರಿಗಣಿಸಿ ಸೂಕ್ತವಾಗಿ ಮೌಲ್ಯ ಮಾಡಿ ಆದಾಯ ಪ್ರಾಪ್ತಿಯ ಮೇಲೆ ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸಲು ಅವಕಾಶ ಇರುತ್ತದೆ. ಸದರಿ ಆದಾಯದಲ್ಲಿ 70 : 30 ರ ಅನುಪಾತದಲ್ಲಿ ರೈತರು ಮತ್ತು ಕಾರ್ಖಾನೆಗಳಿಗೆ ಆದಾಯ ಹಂಚಿಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. |

**ಸಂಖ್ಯೆ:** ಸಿಐ 367 ಎಸ್‌ಜಿಎಫ್ 2025

**(ಶಿವಾನಂದ ಎಸ್.ಪಾಟೀಲ್)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಅನುಬಂಧ-1

**ಆಯುಕ್ತರು**
ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು

**ಕರ್ನಾಟಕ ಸರ್ಕಾರ**

5ನೇ ಮಹಡಿ, ಎಫ್ ಬ್ಲಾಕ್, ಸಿಬಿಎಬಿ ಸಂಕೀರ್ಣ, ಕೆಹೆಚ್‌ಬಿ ಕಟ್ಟಡ,
ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು- 560 009
ದೂರವಾಣಿ: 080-22133390/22133392 ಫ್ಯಾಕ್ಸ್: 08022133391
ಇಮೇಲ್: canecommissioner@gmail.com
ವೆಬ್ ಸೈಟ್: www.canecommissionarate.karnataka.gov.in

ಸಂಖ್ಯೆ: ಡಿಎಸ್‌ಕೆ/ಎಸ್‌ಎಸ್‌ಟಿ/01/2025-26 ದಿನಾಂಕ: 15.09.2025

ರಾಜ್ಯದ ಸಕ್ಕರೆ ಕಾರ್ಖಾನೆಗಳ ಅಧ್ಯಕ್ಷರು/
ವ್ಯವಸ್ಥಾಪಕ ನಿರ್ದೇಶಕರು/
ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು/
ಪ್ರಧಾನ ವ್ಯವಸ್ಥಾಪಕರುಗಳಿಗೆ.

ಮಾನ್ಯರೆ,

ವಿಷಯ :- 2024-25ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯ ಆಧಾರದ ಮೇಲೆ 2025-26ನೇ ಸಾಲಿಗೆ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್.ಆರ್.ಪಿ) ಪ್ರಕಟಣೆಯ ಬಗ್ಗೆ.

ಉಲ್ಲೇಖ :- 1. ಗ್ರಾಹಕ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಕೃಷಿ ಭವನ, ನವದೆಹಲಿ ಇವರ ಪತ್ರ ಸಂ: 3(1)/2024-ಎಸ್‌ಪಿ-I ದಿನಾಂಕ: 06.05.2025
2. ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ: 22.08.2025

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ, ಸರ್ಕಾರವು ಉಲ್ಲೇಖ (1)ರ ಪತ್ರದಂತೆ 2025-26ನೇ ಸಕ್ಕರೆ ಹಂಗಾಮಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (ಎಫ್.ಆರ್.ಪಿ) ನಿಗದಿಪಡಿಸಿರುತ್ತದೆ. 2024-25ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿರುವ ರಾಜ್ಯದ ಸಕ್ಕರೆ ಕಾರ್ಖಾನೆಗಳು ಸಲ್ಲಿಸಿರುವ ಅಂತಿಮ ಉತ್ಪಾದನಾ ವರದಿ (RT 8(C)) ಗಳ ಪ್ರಕಾರ ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯಂತೆ 2025-26ನೇ ಕಬ್ಬು ನುರಿಸುವ ಹಂಗಾಮಿಗೆ ಸಕ್ಕರೆ ಕಾರ್ಖಾನೆಗಳು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2014ರ ಕಲಂ 9(1) ರ ಪ್ರಕಾರ ಮೊದಲ ಕಂತಿನರೂಪದಲ್ಲಿ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು ಪ್ರಕಟಿಸಲು ಉದ್ದೇಶಿಸಲಾಗಿದೆ. ಈ ಕಬ್ಬಿನ ದರವು ಎಫ್.ಆರ್.ಪಿ. ನಿಯಮದಂತೆ ಎಕ್ಸ್-ಗೇಟ್ ದರವಾಗಿರುತ್ತದೆ. 2025-26ನೇ ಹಂಗಾಮಿನಲ್ಲಿ ಪ್ರತಿ

ಮೆ.ಟನ್ ಕಬ್ಬಿಗೆ ಪಾವತಿಸಬೇಕಾದ ಎಫ್.ಆರ್.ಪಿ. ದರವನ್ನು ಕಾರ್ಖಾನೆವಾರು ಲೆಕ್ಕಾಚಾರ ಮಾಡಿ, ಕರಡು ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಈ ಬಗ್ಗೆ ನಿಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, 10 ದಿನಗಳೊಳಗಾಗಿ ಈ ನಿರ್ದೇಶನಾಲಯಕ್ಕೆ ಸಲ್ಲಿಸಲು ಉಲ್ಲೇಖ (2)ರ ಪತ್ರದಲ್ಲಿ ಸೂಚಿಸಲಾಗಿತ್ತು. ಆದರೆ ಇಲ್ಲಿಯವರೆಗೂ ಕಾರ್ಖಾನೆಗಳ ವತಿಯಿಂದ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ.

ಆದ್ದರಿಂದ ರಾಜ್ಯದ ಸಕ್ಕರೆ ಕಾರ್ಖಾನೆಗಳು 2025-26ನೇ ಸಾಲಿಗೆ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್.ಆರ್.ಪಿ) ಅಂತಿಮ ಆದೇಶವನ್ನು ಹೊರಡಿಸಿದೆ ಹಾಗೂ ಇದರ ಪ್ರತಿಯನ್ನು ಕಾರ್ಖಾನೆಯ ಸೂಚನಾ ಫಲಕದಲ್ಲಿ ಪ್ರಕಟಿಸಿ, ಕಬ್ಬು ಬೆಳೆಗಾರ ರೈತರ ಗಮನಕ್ಕೆ ತರಲು ಸಹ ಸೂಚಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು

**ಪ್ರತಿಯನ್ನು:**

1. ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಜಿಲ್ಲಾಧಿಕಾರಿಗಳು, ಬೆಳಗಾವಿ / ಬಾಗಲಕೋಟೆ / ಬೀದರ್ / ಬಳ್ಳಾರಿ / ಹಾವೇರಿ / ಹಾಸನ / ಚಾಮರಾಜನಗರ / ಮೈಸೂರು / ಮಂಡ್ಯ / ವಿಜಯನಗರ / ದಾವಣಗೆರೆ / ಗದಗ / ಕಲಬುರಗಿ / ಉತ್ತರ ಕನ್ನಡ/ ವಿಜಯಪುರ/ ಯಾದಗಿರಿ ಇವರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಆಯುಕ್ತರು**
ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು

**ಕರ್ನಾಟಕ ಸರ್ಕಾರ**

5ನೇ ಮಹಡಿ, ಎಫ್ ಬ್ಲಾಕ್, ಸಿಬಿಎಬಿ ಸಂಕೀರ್ಣ, ಕೆಹೆಚ್‌ಬಿ ಕಟ್ಟಡ,
ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು- 560 009
ದೂರವಾಣಿ: 080-22133390/22133392 ಫ್ಯಾಕ್ಸ್: 08022133391
ಇಮೇಲ್: canecommissioner@gmail.com
ವೆಬ್ ಸೈಟ್: www.canecommissionarate.karnataka.gov.in

ವಿಷಯ:- 2024-25ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯ ಆಧಾರದ ಮೇಲೆ 2025-26ನೇ ಸಾಲಿಗೆ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆ (Fair and Remunerative Price) ಪ್ರಕಟಣೆಯ ಕುರಿತು.

ಉಲ್ಲೇಖ:- ಗ್ರಾಹಕ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಕೃಷಿ ಭವನ, ನವದೆಹಲಿ ಇವರ ಪತ್ರ, ಸಂ: 3(1)/2024-ಎಸ್‌ಪಿ I ದಿನಾಂಕ 06.05.2025

-*-

**ಪೀಠಿಕೆ:**

ಕೇಂದ್ರ ಸರ್ಕಾರವು ಉಲ್ಲೇಖ ರಂತೆ 2025-26ನೇ ಸಕ್ಕರೆ ಹಂಗಾಮಿಗೆ ಈ ಕೆಳಗಿನಂತೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ನಿಗದಿಪಡಿಸಿದೆ.

1. ಶೇಕಡ 10.25 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ ರೂ.3550/-
2. ಶೇಕಡ 10.25 ಕ್ಕೆ ಮೇಲ್ಪಟ್ಟು ಇಳುವರಿಗೆ ನಂತರದ ಶೇಕಡ 1ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್‌ಟನ್‌ಗೆ ರೂ.346/- ರಂತೆ ಹೆಚ್ಚುವರಿ ಬೆಲೆ.
3. ಶೇಕಡ 10.25 ಕ್ಕಿಂತ ಕಡಿಮೆ ಹಾಗೂ ಶೇಕಡ 9.5ಕ್ಕೆ ಮೇಲ್ಪಟ್ಟ ಇಳುವರಿ ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಶೇಕಡ 1 ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.346/-ರ ಸರಾಸರಿಯಂತೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ಕಡಿಮೆ ಮಾಡುವುದು
4. ಶೇಕಡ 9.50 ಅಥವಾ 9.50ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.3290.5/- ಗಳ ನ್ಯಾಯ ಮತ್ತು ಲಾಭದಾಯಕ ಬೆಲೆ.

2024-25ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ಸಲ್ಲಿಸಿದ ಆರ್.ಟಿ 8(ಸಿ) ವರದಿಗಳ ಪ್ರಕಾರ ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯಂತೆ 2025-26ನೇ ಕಬ್ಬು ನುರಿಸುವ ಹಂಗಾಮಿಗೆ ಸದರಿ ಸಕ್ಕರೆ ಕಾರ್ಖಾನೆಗಳು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ-2014ರ ಕಲಂ 9(1) ರ ಪ್ರಕಾರ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ಪ್ರಕಟಿಸಲಾಗಿದೆ. ಈ ಕಬ್ಬಿನ ದರವು ಎಫ್.ಆರ್.ಪಿ. ನಿಯಮದಂತೆ ಎಕ್ಸ್-ಗೇಟ್‌ದರವಾಗಿರುತ್ತದೆ.

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಕಾರ್ಖಾನೆವಾರು ನ್ಯಾಯಯುತ ಮತ್ತು ಲಾಭದಾಯಕ ಬೆಲೆ (Fair and Remunerative Price) ನಿಗದಿಗೊಳಿಸುವ ಸಂಬಂಧ ಈ ಕೆಳಕಂಡ ಆದೇಶ ಹೊರಡಿಸಿದೆ.

# ಆದೇಶ

ಸಂಖ್ಯೆ: ಡಿಎಸ್‌ಕೆ/ಎಸ್‌ಟಿಟಿ/01/2025-26 ದಿನಾಂಕ:15.09.2025

ಕೇಂದ್ರ ಸರ್ಕಾರವು ಉಲ್ಲೇಖ ರಂತೆ 2025-26ನೇ ಸಕ್ಕರೆ ಹಂಗಾಮಿಗೆ ನಿಗದಿಪಡಿಸಿರುವ ನ್ಯಾಯ ಮತ್ತು ಲಾಭದಾಯಕ ದರದ (Fair and Remunerative Price) ಆಧಾರದ ಮೇಲೆ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013 ಮತ್ತು (ತಿದ್ದುಪಡಿ) ಅಧಿನಿಯಮ 2014ರ ಕಲಂ 2(ii)(ಇಎ) ಮತ್ತು 9(1) ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಎಂ.ಆರ್. ರವಿಕುಮಾರ್, ಭಾ.ಆ.ಸೇ., ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಆದ ನಾನು 2024-25ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯನ್ನು ಆಧಾರವಾಗಿಟ್ಟುಕೊಂಡು 2025-26ನೇ ಸಾಲಿಗೆ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2014ರ ಕಲಂ 9(1)ರ ಪ್ರಕಾರ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ಈ ಕೆಳಕಂಡಂತೆ ಅಧಿಕೃತವಾಗಿ ಪ್ರಕಟಿಸಿರುತ್ತೇನೆ. ಈ ಕಬ್ಬಿನ ದರವು ಎಫ್.ಆರ್.ಪಿ. ನಿಯಮದಂತೆ ಎಕ್ಸ್-ಗೇಟ್ ದರವಾಗಿರುತ್ತದೆ. ಈ ಪ್ರಕಟಣೆಯಲ್ಲಿನ ಅಂಕಿ ಅಂಶಗಳು ಕೇಂದ್ರ ಸರ್ಕಾರವು ಕಾರ್ಖಾನೆವಾರು ಹೊರಡಿಸುವ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯ (Fair and Remunerative Price) ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.

| ಕ್ರ. ಸಂ | ಕಾರ್ಖಾನೆಯ ಹೆಸರು | 2024-25ನೇ ಸಾಲಿನಲ್ಲಿ (01.07.2024 ರಿಂದ 30.06.2025) ರವರೆಗೆ | | | 2025-26ನೇ ಸಾಲಿಗೆ ಪ್ರತಿ ಮೆ.ಟನ್ ಕಬ್ಬಿಗೆ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್‌ಆರ್‌ಪಿ) (ರೂ.ಗಳಲ್ಲಿ) |
|---|---|---|---|---|---|
| | | ನುರಿಸಿದ ಕಬ್ಬಿನ ಪ್ರಮಾಣ (ಮೆ. ಟನ್‌ಗಳಲ್ಲಿ) | ಉತ್ಪಾದಿಸಿದ ಸಕ್ಕರೆ ಪ್ರಮಾಣ (ಮೆ.ಟನ್‌ಗಳಲ್ಲಿ) | ಶೇಕಡ ಇಳುವರಿ (%) | |
| | **ಬೆಳಗಾವಿ ಜಿಲ್ಲೆ** | | | | |
| 1 | ಅರಿಹಂತ ಶುಗರ್ಸ್ ಇಂಡಸ್ಟ್ರಿಸ್ ಲಿ., ಜೈನಾಪುರ, ತಾಲ್ಲೂಕು: ಚಿಕ್ಕೋಡಿ, ಜಿಲ್ಲೆ: ಬೆಳಗಾವಿ. | 301123 | 35443 | 11.77 | 4076 |
| 2 | ಅಥಣಿ ಶುಗರ್ಸ್ ಲಿ., ವಿಷ್ಣುಅಣ್ಣಾನಗರ, ತಾಲ್ಲೂಕು: ಅಥಣಿ, ಜಿಲ್ಲೆ: ಬೆಳಗಾವಿ | 954224 | 94265 | 10.85 | 3758 |
| 3 | ಬೆಳಗಾಂ ಶುಗರ್ಸ್ ಪ್ರೈ ಲಿ, ಹುದಲಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲೆ: ಬೆಳಗಾವಿ | 1055053 | 124504 | 11.80 | 4086 |
| 4 | ಚಿದಾನಂದ ಬಸಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ನಿ, ಶಾಂತಪ್ಪನ ಮಿರ್ಜಿ ನಗರ, ತಾಲ್ಲೂಕು: ಚಿಕ್ಕೋಡಿ, ಜಿಲ್ಲೆ: ಬೆಳಗಾವಿ. | 998408 | 78670 | 11.46 | 3969 |

| | | | | | |
|---|---|---|---|---|---|
| 5 | ಇ.ಐ.ಡಿ ಪ್ಯಾರಿ (ಇಂಡಿಯಾ) ಲಿಮಿಟೆಡ್, ಖಾನಪೇಟ್, ತಾಲ್ಲೂಕು:ರಾಮದುರ್ಗ, ಜಿಲ್ಲೆ:ಬೆಳಗಾವಿ (ಧನಲಕ್ಷ್ಮಿ ಸಹಕಾರಿ ಸಕ್ಕರೆ ಲಿಮಿಟೆಡ್ ಗುತ್ತಿಗೆದಾರರು) | 535239 | 53199 | 11.93 | 4131 |
| 6 | ದಿ. ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಗೋಕಾಕ್, ಜಿಲ್ಲೆ: ಬೆಳಗಾವಿ. | 230547 | 25508 | 11.04 | 3823 |
| 7 | ಗೋಕಾಕ್ ಶುಗರ್ಸ್. ಲಿ., ಕೊಳವಿ, ತಾಲ್ಲೂಕು: ಗೋಕಾಕ್, ಜಿಲ್ಲೆ: ಬೆಳಗಾವಿ. | 407455 | 41805 | 11.38 | 3941 |
| 8 | ಶ್ರೀ ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಶಂಕರಾನಂದ ನಗರ, ನಿಪ್ಪಾಣಿ, ಜಿಲ್ಲೆ: ಬೆಳಗಾವಿ. | 630458 | 48707 | 11.43 | 3958 |
| 9 | ಹರ್ಷ ಶುಗರ್ಸ್ ಲಿ., ತಾಲ್ಲೂಕು: ಸವದತ್ತಿ, ಜಿಲ್ಲೆ: ಬೆಳಗಾವಿ. | 627305 | 61748 | 11.22 | 3886 |
| 10 | ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಂಕೇಶ್ವರ, ಜಿಲ್ಲೆ: ಬೆಳಗಾವಿ. | 520847 | 48050 | 10.82 | 3747 |
| 11 | ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ಪೋಸ್ಟ್:ಸಂಕೋನಟ್ಟಿ, ತಾಲ್ಲೂಕು:ಅಥಣಿ, ಜಿಲ್ಲೆ: ಬೆಳಗಾವಿ | 436082 | 48200 | 11.05 | 3827 |
| 12 | ಲೈಲಾ ಶುಗರ್ಸ್ ಪ್ರೈ ಲಿ., (ಶ್ರೀ ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಗುತ್ತಿಗೆದಾರರು), ಖಾನಾಪುರ, ಜಿಲ್ಲೆ, ಬೆಳಗಾವಿ | 174586 | 19284 | 11.05 | 3827 |
| 13 | ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ. ಹುಬ್ಬಳ್ಳಿ ಜಿಲ್ಲೆ: ಬೆಳಗಾವಿ | 162276 | 18016 | 11.10 | 3844 |
| 14 | ಶ್ರೀ ರೇಣುಕಾ ಶುಗರ್ಸ್ ಲಿ., ಯುನಿಟ್-III, ಭಾವಚಿ, ಪೋಸ್ಟ್: ಮೆಕ್ಕಳ್ಳಿ, ತಾಲ್ಲೂಕು: ರಾಯಬಾಗ್, ಜಿಲ್ಲೆ: ಬೆಳಗಾವಿ. | 284919 | 26705 | 10.72 | 3713 |
| 15 | ಶ್ರೀ ರೇಣುಕಾ ಶುಗರ್ಸ್ ಲಿ, ಯುನಿಟ್-4 ಬುರ್ಲಟ್ಟಿ ತಾಲ್ಲೂಕು: ಅಥಣಿ, ಜಿಲ್ಲೆ: ಬೆಳಗಾವಿ | 991915 | 33538 | 11.02 | 3816 |
| 16 | ಶ್ರೀ ರೇಣುಕಾ ಶುಗರ್ಸ್ ಲಿ, ಯುನಿಟ್-1 ಮುನೋಳಿ, ತಾಲ್ಲೂಕು: ಸವದತ್ತಿ, ಜಿಲ್ಲೆ: ಬೆಳಗಾವಿ | 901576 | 28830 | 11.55 | 4000 |

| | | | | | |
|---|---|---|---|---|---|
| 17 | ಸತೀಶ್ ಶುಗರ್ಸ್ ಲಿ., ಹುಣಶ್ಯಾಳ್ ಗ್ರಾಮ, ತಾಲ್ಲೂಕು: ಗೋಕಾಕ್, ಜಿಲ್ಲೆ: ಬೆಳಗಾವಿ. | 1211611 | 80846 | 11.65 | 4034 |
| 18 | ಶ್ರೀ ಸಂಗಮ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಿಡಕಲ್‌ಡ್ಯಾಂ, ತಾಲ್ಲೂಕು:ಹುಕ್ಕೇರಿ, ಜಿಲ್ಲೆ: ಬೆಳಗಾವಿ | 214045 | 25888 | 12.10 | 4188 |
| 19 | ಶಿರಗುಪ್ಪಿ ಶುಗರ್ ವರ್ಕ್ಸ್ ಲಿ., ತಾಲ್ಲೂಕು: ಕಾಗವಾಡ, ಜಿಲ್ಲೆ: ಬೆಳಗಾವಿ | 831528 | 64970 | 11.96 | 4142 |
| 20 | ಶಿವಶಕ್ತಿ ಶುಗರ್ಸ್ ಲಿಮಿಟೆಡ್, ಸವದತ್ತಿ ತಾಲ್ಲೂಕು:ರಾಯಬಾಗ, ಜಿಲ್ಲೆ:ಬೆಳಗಾವಿ | 1822550 | 123951 | 11.08 | 3837 |
| 21 | ಶ್ರೀ ಶಿವಸಾಗರ ಶುಗರ್ ಅಂಡ್ ಆಗ್ರೋ ಪ್ರಾಡಕ್ಟ್ ಲಿಮಿಟೆಡ್ (ಗುಡಗುಂಟಿ ಶುಗರ್ಸ್ ಅಂಡ್ ಬಯೋಎನರ್ಜಿ ಲಿಮಿಟೆಡ್ ಇದರ ಅಂಗಸಂಸ್ಥೆ), ಉದುಪುಡಿ ಗ್ರಾಮ, ತಾಲ್ಲೂಕು: ರಾಮದುರ್ಗ, ಜಿಲ್ಲೆ: ಬೆಳಗಾವಿ | 404736 | 38620 | 10.90 | 3775 |
| 22 | ಶ್ರೀ ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೈಲಹೊಂಗಲ, ಜಿಲ್ಲೆ: ಬೆಳಗಾವಿ | 206173 | 25844 | 12.53 | 4339 |
| 23 | ಸೌಭಾಗ್ಯಲಕ್ಷ್ಮಿ ಶುಗರ್ಸ್, ಹಿರೇನಂದಿ ಗ್ರಾಮ, ತಾಲ್ಲೂಕು:ಗೋಕಾಕ್, ಜಿಲ್ಲೆ: ಬೆಳಗಾವಿ | 346248 | 36040 | 10.42 | 3609 |
| 24 | ಶ್ರೀ ಬಸವೇಶ್ವರ ಶುಗರ್ಸ್ ಲಿಮಿಟೆಟ್, ಬಳ್ಳಿಗೇರಿ, ತಾಲ್ಲೂಕು: ಅಥಣಿ, ಜಿಲ್ಲೆ: ಬೆಳಗಾವಿ | 89345 | 524 | 11.07 | 3834 |
| 25 | ದಿ ಉಗಾರ್ ಶುಗರ್ ವರ್ಕ್ಸ್ ಲಿ, ಪೋಸ್ಟ್: ಉಗಾರ್‌ಖುರ್ದ್, ಜಿಲ್ಲೆ: ಬೆಳಗಾವಿ | 1628950 | 97272 | 10.75 | 3723 |
| 26 | ವೆಂಕಟೇಶ್ವರ ಪವರ್ ಪ್ರಾಜೆಕ್ಟ್ ಲಿ., ಪೋಸ್ಟ್: ಬೇಡಕಿಹಾಲ, ತಾಲ್ಲೂಕು: ನಿಪ್ಪಾಣಿ, ಜಿಲ್ಲೆ: ಬೆಳಗಾವಿ. | 1125512 | 135074 | 12.00 | 4156 |
| 27 | ವಿಶ್ವರಾಜ್ ಶುಗರ್ಸ್ ಲಿಮಿಟೆಡ್, ಬೆಲ್ಲದ-ಬಾಗೇವಾಡಿ, ತಾಲ್ಲೂಕು: ಹುಕ್ಕೇರಿ, ಜಿಲ್ಲೆ: ಬೆಳಗಾವಿ | 744743 | 55290 | 11.54 | 3996 |
| 28 | ಇಂಡಿಯನ್ ಕೇನ್ ಪವರ್ ಲಿ. ಘಟಕ: ಅಲಗವಾಡಿ ಬೀರೇಶ್ವರ ಶುಗರ್ಸ್ ಅಲಗವಾಡಿ ಗ್ರಾಮ, ತಾಲ್ಲೂಕು : ರಾಯಬಾಗ, ಜಿಲ್ಲೆ: ಬೆಳಗಾವಿ | 1209049 | 109200 | 10.41 | 3605 |

| | | | | | |
|---|---|---|---|---|---|
| 29 | ಇನಾಂದಾರ್ ಶುಗರ್ಸ್ ಲಿಮಿಟೆಡ್, ಹಿರೇಕೊಪ್ಪ, ಮಾರಕುಂಬಿ ತಾಲ್ಲೂಕು:ಸವದತ್ತಿ, ಜಿಲ್ಲೆ: ಬೆಳಗಾವಿ | 367512 | 36025 | 11.46 | 3969 |
| | **ಬಾಗಲಕೋಟೆ ಜಿಲ್ಲೆ.** | | | | |
| 30 | ನಿರಾಣಿ ಶುಗರ್ಸ್ ಲಿಮಿಟೆಡ್ ಯುನಿಟ್-5, ಮಸ್ತಿಗೇರಿ, ತಾಲ್ಲೂಕು: ಬಾದಾಮಿ, ಜಿಲ್ಲೆ: ಬಾಗಲಕೋಟೆ | 210419 | 19088 | 10.98 | 3803 |
| 31 | ಬೀಳಗಿ ಶುಗರ್ ಮಿಲ್ ಲಿಮಿಟೆಡ್, ತಾಲ್ಲೂಕು: ಬೀಳಗಿ,ಜಿಲ್ಲೆ: ಬಾಗಲಕೋಟೆ | 910214 | 66786 | 10.42 | 3609 |
| 32 | ಇಐಡಿ ಪ್ಯಾರಿ (ಇಂಡಿಯಾ) ಲಿಮಿಟೆಡ್,, ನಾಗರಾಳ, ನೈನಿಗಲಿ, ಬಾಗಲಕೋಟೆ ತಾಲ್ಲೂಕು, & ಜಿಲ್ಲೆ | 634650 | 55350 | 11.87 | 4111 |
| 33 | ಜೆಮ್ ಶುಗರ್ಸ್ ಲಿ., ಕುಂದರಗಿ, ಬೀಳಗಿ, ಜಿಲ್ಲೆ:ಬಾಗಲಕೋಟೆ. | 602726 | 49704 | 10.85 | 3758 |
| 34 | ಗೋದಾವರಿ ಬಯೋರಿಫೈನರೀಸ್ ಲಿ., ಸಮೀರವಾಡಿ, ಜಿಲ್ಲೆ:ಬಾಗಲಕೋಟೆ | 2465899 | 151497 | 10.91 | 3778 |
| 35 | ಇಂಡಿಯನ್ ಕೇನ್ ಪವರ್ ಲಿ., ಉತ್ತೂರು, ಮುಧೋಳ್, ಬಾಗಲಕೋಟೆ ಜಿಲ್ಲೆ. | 2301515 | 228000 | 10.73 | 3716 |
| 36 | ಜಮಖಂಡಿ ಶುಗರ್ಸ್ ಲಿಮಿಟೆಡ್, ಹಿರೇಪಡಸಲಗಿ, ನಾಗನೂರು ಪೋಸ್ಟ್, ತಾಲ್ಲೂಕು: ಜಮಖಂಡಿ, ಜಿಲ್ಲೆ: ಬಾಗಲಕೋಟೆ | 876589 | 58044 | 10.78 | 3733 |
| 37 | ಮೆಲ್ಬ್ರೊ ಶುಗರ್ಸ್ ಲಿಮಿಟೆಡ್, ಶಿರೂರು, ತಾಲ್ಲೂಕು ಮತ್ತು ಜಿಲ್ಲೆ:ಬಾಗಲಕೋಟೆ | 616981 | 55800 | 10.57 | 3661 |
| 38 | ನಿರಾಣಿ ಶುಗರ್ಸ್ ಲಿಮಿಟೆಡ್, ಯುನಿಟ್-[illegible], ಕಲ್ಲಾಪುರ ಎಸ್.ಕೆ, ತಾಲ್ಲೂಕು: ಬಾದಾಮಿ, ಜಿಲ್ಲೆ: ಬಾಗಲಕೋಟೆ | 705899 | 38407 | 11.00 | 3810 |
| 39 | ನಿರಾಣಿ ಶುಗರ್ಸ್ ಲಿಮಿಟೆಡ್, ಯುನಿಟ್-1, ಕುಳಲಿ ಕ್ರಾಸ್, ಮುಧೋಳ ತಾಲ್ಲೂಕು: ಮುಧೋಳ ಜಿಲ್ಲೆ: ಬಾಗಲಕೋಟೆ | 2008702 | 124355 | 10.90 | 3775 |
| 40 | ಶ್ರೀ ಪ್ರಭುಲಿಂಗೇಶ್ವರ ಶುಗರ್ಸ್ & ಕೆಮಿಕಲ್ಸ್ ಲಿ., ತಾಲ್ಲೂಕು:ಜಮಖಂಡಿ, ಜಿಲ್ಲೆ: ಬಾಗಲಕೋಟೆ | 1761151 | 149430 | 10.74 | 3720 |

| | | | | | |
|---|---|---|---|---|---|
| 41 | ನಿರಾಣಿ ಶುಗರ್ಸ್ ಲಿಮಿಟೆಡ್, ಯುನಿಟ್-4, ಕೆರಕಲಮಟ್ಟಿ, ತಾಲ್ಲೂಕು: ಬಾದಾಮಿ, ಜಿಲ್ಲೆ; ಬಾಗಲಕೋಟೆ | 482473 | 44296 | 10.88 | 3768 |
| 42 | ನಿರಾಣಿ ಶುಗರ್ಸ್ ಲಿಮಿಟೆಡ್, ಯುನಿಟ್-2, ಹಿಪ್ಪರಗಿ-ಮೈಗೂರ, ತಾಲ್ಲೂಕು:ಜಮಖಂಡಿ ಜಿಲ್ಲೆ; ಬಾಗಲಕೋಟೆ | 1689224 | 114710 | 10.92 | 3782 |
| 43 | ಬೀಳಗಿ ಶುಗರ್ ಮಿಲ್ ಲಿಮಿಟೆಡ್, ಯುನಿಟ್-2, (ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು) ರನ್ನಾನಗರ, ತಿಮ್ಮಾಪೂರ, ತಾಲ್ಲೂಕು: ಮುಧೋಳ್, ಜಿಲ್ಲೆ: ಬಾಗಲಕೋಟೆ<br>**ಷರಾ:**<br>**ಕಾರ್ಖಾನೆ ಕಳೆದ 2024-25ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿರುವುದಿಲ್ಲ, ಆದ್ದರಿಂದ 2022-23 ರಲ್ಲಿನ ಅಂಕಿ-ಅಂಶಗಳನ್ನು ಪರಿಗಣಿಸಿ ದರ ನಿಗದಿಗೊಳಿಸಿದೆ.** | 402085 | 44315 | 11.02 | 3816 |
| | **ಬಳ್ಳಾರಿ ಜಿಲ್ಲೆ.** | | | | |
| 44 | ಎನ್‌ಎಸ್‌ಎಲ್ ಶುಗರ್ಸ್ (ತುಂಗಾಭದ್ರಾ) ಲಿಮಿಟೆಡ್., ದೇಶನೂರು, ತಾಲ್ಲೂಕು: ಶಿರಗುಪ್ಪ ಜಿಲ್ಲೆ: ಬಳ್ಳಾರಿ. | 193270 | 17669 | 9.20 | 3291 |
| | **ಬೀದರ್ ಜಿಲ್ಲೆ.** | | | | |
| 45 | ಭಾಲ್ಕೇಶ್ವರ ಶುಗರ್ಸ್ ಲಿ. ಮಡಕಟ್ಟಿ ಕ್ರಾಸ್, ಬಾಜೋಳಗ, ತಾಲ್ಲೂಕು: ಭಾಲ್ಕಿ ಜಿಲ್ಲೆ: ಬೀದರ್ | 272291 | 15670 | 9.51 | 3294 |
| 46 | ಬೀದರ್ ಕಿಸಾನ್ ಸಕ್ಕರೆ ಕಾರ್ಖಾನೆ ಲಿ., ಮಾಗದಲ್ ಗ್ರಾಮ, ಪೋಸ್ಟ್: ಮುರಕುಂಡಿ, ತಾಲ್ಲೂಕು ಮತ್ತು ಜಿಲ್ಲೆ ಬೀದರ್ | 444242 | 45312 | 10.20 | 3533 |
| 47 | ಧಿ ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಭಾಲ್ಕಿ ಜಿಲ್ಲೆ:ಬೀದರ್ | 397454 | 39140 | 9.85 | 3412 |
| 48 | ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಇಮಾಮಪುರ ಗ್ರಾಮ, (ಜನವಾಡ ಹತ್ತಿರ) ತಾಲ್ಲೂಕು & ಜಿಲ್ಲೆ : ಬೀದರ್ | 301993 | 29435 | 9.75 | 3377 |

| | | | | | |
|---|---|---|---|---|---|
| 49 | ಶ್ರೀ ಭವಾನಿ ಖಂಡಸಾರಿ ಶುಗ್ಸ್ ಲಿ, ಬರೂರು ಗ್ರಾಮ, ತಾಲ್ಲೂಕು & ಜಿಲ್ಲೆ: ಬೀದರ್. | 173984 | 15111 | 8.69 | 3291 |
| | **ಚಾಮರಾಜನಗರ ಜಿಲ್ಲೆ** | | | | |
| 50 | ಬನ್ನಾರಿ ಅಮ್ಮನ್ ಶುಗರ್ಸ್ ಲಿ., ಯುನಿಟ್-III, ಕುಂತೂರು ಗ್ರಾಮ, ತಾಲ್ಲೂಕು: ಕೊಳ್ಳೇಗಾಲ, ಜಿಲ್ಲೆ: ಚಾಮರಾಜನಗರ. | 589111 | 52918 | 8.95 | 3291 |
| | **ದಾವಣಗೆರೆ ಜಿಲ್ಲೆ** | | | | |
| 51 | ದಾವಣಗೆರೆ ಶುಗರ್ಸ್ ಲಿ., ಕುಕ್ಕುವಾಡ, ತಾಲ್ಲೂಕು & ಜಿಲ್ಲೆ :ದಾವಣಗೆರೆ | 182242 | 13261 | 8.87 | 3291 |
| | **ಗದಗ ಜಿಲ್ಲೆ.** | | | | |
| 52 | ವಿಜಯನಗರ ಶುಗರ್ಸ್ ಪ್ರೈ ಲಿಮಿಟೆಡ್, (ಮೃದಗಿರಿ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್ ನಿ., ಗುತ್ತಿಗೆದಾರರು), ಗಂಗಾಪುರ ಗ್ರಾಮ ತಾಲ್ಲೂಕು: ಮುಂಡರಗಿ, ಜಿಲ್ಲೆ: ಗದಗ. | 378707 | 32011 | 9.61 | 3329 |
| | **ಹಾಸನ ಜಿಲ್ಲೆ** | | | | |
| 53 | ಚಾಮುಂಡೇಶ್ವರಿ ಶುಗರ್ಸ್ ಲಿ., (ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು), ಶ್ರೀನಿವಾಸಪುರ, ತಾಲ್ಲೂಕು: ಚನ್ನರಾಯಪಟ್ಟಣ ಜಿಲ್ಲೆ:ಹಾಸನ | 413707 | 38433 | 9.29 | 3291 |
| | **ಹಾವೇರಿ ಜಿಲ್ಲೆ.** | | | | |
| 54 | ಜಿಎಂ ಶುಗರ್ ಅಂಡ್ ಎನರ್ಜಿ ಲಿ.(ಗುತ್ತಿಗೆದಾರರು ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿ.) ಸಂಗೂರು, ತಾಲ್ಲೂಕು ಮತ್ತು ಜಿಲ್ಲೆ: ಹಾವೇರಿ. | 199826 | 18794 | 9.40 | 3291 |
| 55 | ಜಿಎಂ ಶುಗರ್ ಅಂಡ್ ಎನರ್ಜಿ ಲಿ., ಯುನಿಟ್-2, ಚಟ್ಟಹಳ್ಳಿ ಗ್ರಾಮ, ತಾಲ್ಲೂಕು: ರಟ್ಟಿ ಹಳ್ಳಿ, ಜಿಲ್ಲೆ: ಹಾವೇರಿ | 302587 | 0 | 9.46 | 3291 |
| 56 | ವಿ.ಐ.ಎನ್.ಪಿ ಡಿಸ್ಟಲರೀಸ್ & ಶುಗರ್ಸ್ ಪ್ರೈ ಲಿ., ಕೋಣನಕೆರೆ ಗ್ರಾಮ, ಶಿಗ್ಗಾಂವ್ ತಾಲ್ಲೂಕು, ಜಿಲ್ಲೆ: ಹಾವೇರಿ | 365700 | 9019 | 9.51 | 3294 |

Commissioner for Cane Development Director of Sugar ... Karnataka ... BANGALORE

| | | | | | |
|---|---|---|---|---|---|
| | **ಕಲಬುರಗಿ ಜಿಲ್ಲೆ.** | | | | |
| 57 | ಕೆಪಿಆರ್ ಶುಗರ್ & ಅಪ್ಪರೆಲ್ಸ್ ಲಿ.,<br>ಚಿನ್ನಮ್ಮಗೇರಿ ಗ್ರಾಮ, ಚೌಡಾಪುರ,<br>ತಾಲ್ಲೂಕು: ಅಫಜಲಪುರ,<br>ಜಿಲ್ಲೆ: ಕಲಬುರಗಿ | 1112757 | 70000 | 10.14 | 3512 |
| 58 | ಎನ್ಎಸ್ಎಲ್ ಶುಗರ್ಸ್ (ಆಳಂದ<br>ಸಹಕಾರಿ ಸಕ್ಕರೆ ಕಾರ್ಖಾನೆ<br>ಗುತ್ತಿಗೆದಾರರು) ಭೂಸನೂರ್,<br>ತಾಲ್ಲೂಕು: ಆಳಂದ, ಜಿಲ್ಲೆ: ಕಲಬುರಗಿ | 727386 | 738941 | 10.15 | 3515 |
| 59 | ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್,<br>ಯುನಿಟ್-5, ಹವಳಗಾ ಗ್ರಾಮ,<br>ತಾಲ್ಲೂಕು: ಅಫ್ಜಲಪುರ,<br>ಜಿಲ್ಲೆ: ಕಲಬುರಗಿ. | 704687 | 30725 | 9.60 | 3325 |
| 60 | ದಿ ಉಗಾರ್ ಶುಗರ್ ವರ್ಕ್ಸ್ ಲಿ,<br>ನಾಗರಹಳ್ಳಿ ಮಲ್ಲಿ, ತಾಲ್ಲೂಕು:ಜೇವರ್ಗಿ,<br>ಜಿಲ್ಲೆ: ಕಲಬುರಗಿ | 351689 | 31135 | 8.80 | 3291 |
| 61 | ಸಿದ್ದಸಿರಿ ಸೌಹಾರ್ದ ಸಹಕಾರಿ ನಿ.,<br>ಚಿಂಚೋಳಿ, ತಾಲ್ಲೂಕು: ಚಿಂಚೋಳಿ,<br>ಜಿಲ್ಲೆ: ಕಲಬುರಗಿ<br>**ಷರಾ:**<br>**ಕಾರ್ಖಾನೆ ಕಳೆದ 2024-25ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿರುವುದಿಲ್ಲ. ಆದ್ದರಿಂದ 2023-24 ರಲ್ಲಿನ ಅಂಕಿ-ಅಂಶಗಳನ್ನು ಪರಿಗಣಿಸಿ ದರ ನಿಗದಿಗೊಳಿಸಿದೆ.** | 253351 | 0 | 10.16 | 3519 |
| | **ಮಂಡ್ಯ ಜಿಲ್ಲೆ** | | | | |
| 62 | ಕೋರಮಂಡಲ್ ಶುಗರ್ಸ್ ಲಿ.,<br>ಮಾಕವಳ್ಳಿ, ತಾಲ್ಲೂಕು: ಕೆ.ಆರ್.ಪೇಟೆ,<br>ಜಿಲ್ಲೆ: ಮಂಡ್ಯ | 484880 | 44100 | 9.10 | 3291 |
| 63 | ಮೈಸೂರು ಸಕ್ಕರೆ ಕಂಪನಿ ನಿ., ಸಕ್ಕರೆ<br>ನಗರ, ಜಿಲ್ಲೆ: ಮಂಡ್ಯ | 199888 | 12685 | 6.35 | 3291 |
| 64 | ಎಂ.ಆರ್.ಎನ್ ಕೇನ್ ಪವರ್ ಅಂಡ್<br>ಬಯೋರಿಫೈನರೀಸ್ ಪ್ರೈ ಲಿ.,<br>(ಪಾಂಡವಪುರ ಸಹಕಾರಿ ಸಕ್ಕರೆ<br>ಕಾರ್ಖಾನೆಯ ಗುತ್ತಿಗೆದಾರರು),<br>ತಾಲ್ಲೂಕು: ಪಾಂಡವಪುರ,<br>ಜಿಲ್ಲೆ: ಮಂಡ್ಯ | 613354 | 54940 | 8.90 | 3291 |

| | | | | | |
|---|---|---|---|---|---|
| 65 | ಎನ್.ಎಸ್.ಎಲ್ ಶುಗರ್ಸ್ ಲಿ., ಕೊಪ್ಪ, ತಾಲ್ಲೂಕು: ಮದ್ದೂರು, ಜಿಲ್ಲೆ:ಮಂಡ್ಯ | 622918 | 56134 | 9.00 | 3291 |
| 66 | ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿ., ಭಾರತಿ ನಗರ, ತಾಲ್ಲೂಕು: ಮದ್ದೂರು, ಜಿಲ್ಲೆ:ಮಂಡ್ಯ | 766956 | 70781 | 9.22 | 3291 |
| | **ಮೈಸೂರು ಜಿಲ್ಲೆ** | | | | |
| 67 | ಬನ್ನಾರಿ ಅಮ್ಮನ್ ಶುಗರ್ಸ ಲಿ., ಅಲಗ ಗ್ರಾಮ, ತಾಲ್ಲೂಕು: ನಂಜನಗೂಡು, ಜಿಲ್ಲೆ: ಮೈಸೂರು | 1006892 | 91016 | 9.03 | 3291 |
| | **ಉತ್ತರ ಕನ್ನಡ ಜಿಲ್ಲೆ.** | | | | |
| 68 | ಇಐಡಿ ಪ್ಯಾರಿ (ಇಂಡಿಯಾ) ಲಿ., ಹುಲ್ಲಟ್ಟಿ ಗ್ರಾಮ, ಹಲಿಯಾಳ, ಜಿಲ್ಲೆ: ಉತ್ತರ ಕನ್ನಡ | 986808 | 103019 | 11.55 | 4000 |
| | **ವಿಜಯಪುರ ಜಿಲ್ಲೆ.** | | | | |
| 69 | ಶ್ರೀ ದತ್ ಇಂಡಿಯಾ ಪ್ರೈ ಲಿ., ಹಾವಿನಾಳ್, ತಾಲ್ಲೂಕು: ಚಡಚಣ, ಜಿಲ್ಲೆ: ವಿಜಯಪುರ. | 392180 | 34752 | 10.38 | 3594 |
| 70 | ಜಮಖಂಡಿ ಶುಗರ್ಸ್ ಲಿಮಿಟೆಡ್, ಘಟಕ-2, ನಾದ್‌ಕೆಡಿ, ತಾಲ್ಲೂಕು: ಇಂಡಿ, ಜಿಲ್ಲೆ: ವಿಜಯಪುರ | 306467 | 29593 | 9.66 | 3346 |
| 71 | [illegible]ಆರ್ ಶುಗರ್ ಮಿಲ್ ಲಿ., ಆಲುಮೇಲು ಗ್ರಾಮ, ತಾಲ್ಲೂಕು: ಸಿಂದಗಿ, ಜಿಲ್ಲೆ: ವಿಜಯಪುರ. | 1018793 | 54850 | 9.44 | 3291 |
| 72 | ಶ್ರೀ ಸ್ವಾಮಿಬಸವ ಶುಗರ್ಸ್ ಲಿಮಿಟೆಡ್, [illegible] ಮಲಘಾಣ, ತಾಲ್ಲೂಕು: ಆಲುಮೇಲು, ಜಿಲ್ಲೆ: ವಿಜಯಪುರ | 264457 | 23432 | 8.86 | 3291 |
| 73 | ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕೃಷ್ಣಾನಗರ, ಪೋಸ್ಟ್: ಹೊಸೂರು, ತಾಲ್ಲೂಕು: ಬಬಲೇಶ್ವರ, ಜಿಲ್ಲೆ : ವಿಜಯಪುರ. | 427676 | 47221 | 11.00 | 3810 |
| 74 | ಸಂಗಮನಾಥ ಶುಗರ್ಸ್ ಲಿಮಿಟೆಡ್, ಯರಗಲ್ ಬಿ.ಕೆ. ತಾಲ್ಲೂಕು: ಸಿಂದಗಿ, ಜಿಲ್ಲೆ: ವಿಜಯಪುರ | 509674 | 40103 | 9.43 | 3291 |
| 75 | ಶ್ರೀ ಬಾಲಾಜಿ ಶುಗರ್ಸ್ & ಕೆಮಿಕಲ್ಸ್ ಪ್ರೈ ಲಿಮಿಟೆಡ್, ಯರಗಲ ತಾಲ್ಲೂಕು: ಮುದ್ದೇಬಿಹಾಳ, ಜಿಲ್ಲೆ: ವಿಜಯಪುರ | 810728 | 65593 | 10.89 | 3771 |

| | | | | | |
|---|---|---|---|---|---|
| 76 | ಶ್ರೀ ಬಸವೇಶ್ವರ ಶುಗರ್ಸ್ ಲಿಮಿಟೆಡ್, ಕಾರಜೋಳ ಗ್ರಾಮ, ತಾಲ್ಲೂಕು: ಬಬಲೇಶ್ವರ, ಜಿಲ್ಲೆ: ವಿಜಯಪುರ | 518608 | 48867 | 10.90 | 3775 |
| 77 | ಶ್ರೀ ಭೀಮಾಶಂಕರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಮರಗೂರ, ತಾಲ್ಲೂಕು:ಇಂಡಿ, ಜಿಲ್ಲೆ: ವಿಜಯಪುರ. | 327452 | 30028 | 9.17 | 3291 |
| 78 | ಇಂಡಿಯನ್ ಕೇನ್ ಪವರ್ ಲಿ. ಘಟಕ: ಡಿಎಸ್ಎಸ್ಎಸ್ಎಸ್, ಹಿರೇಬೇಮನೂರು ಗ್ರಾಮ, ತಾಲ್ಲೂಕು: ಇಂಡಿ ,ಜಿಲ್ಲೆ: ವಿಜಯಪುರ | 171126 | 16873 | 9.86 | 3415 |
| | **ವಿಜಯನಗರ ಜಿಲ್ಲೆ** | | | | |
| 79 | ಮೈಲಾರ ಶುಗರ್ಸ್ ಲಿ., ಬೀರಬ್ಬಿ ತಾಲ್ಲೂಕು: ಹೂವಿನಹಡಗಲಿ, ಜಿಲ್ಲೆ: ವಿಜಯನಗರ | 444614 | 19211 | 9.37 | 3291 |
| 80 | ಶ್ಯಾಮನೂರು ಶುಗರ್ಸ್ ಲಿ., ದುಗ್ಗಾವತಿ, ತಾಲ್ಲೂಕು: ಹರಪನಹಳ್ಳಿ, ಜಿಲ್ಲೆ:ವಿಜಯನಗರ | 142501 | 6347 | 8.40 | 3291 |
| | **ಯಾದಗಿರಿ ಜಿಲ್ಲೆ.** | | | | |
| 81 | ಕೋರ್‌ಗ್ರೀನ್ ಶುಗರ್ & ಫ್ಯುಯೆಲ್ಸ್ ಪ್ರೈ ಲಿಮಿಟೆಡ್. ತುಮಕೂರು ಗ್ರಾಮ, ತಾಲ್ಲೂಕು:ವಡೇಗೆರೆ, ಜಿಲ್ಲೆ: ಯಾದಗಿರಿ | 359523 | 30782 | 9.92 | 3436 |

ಈ ಆದೇಶವನ್ನು ನನ್ನ ಹಸ್ತಾಕ್ಷರ ಮತ್ತು ಕಛೇರಿ ಮೊಹರಿನೊಂದಿಗೆ ದಿನಾಂಕ 15.09.2025 ರಂದು ಹೊರಡಿಸುತ್ತೇನೆ.

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು

BANGALORE.

ಇವರಿಗೆ:

ರಾಜ್ಯದ ಸಕ್ಕರೆ ಕಾರ್ಖಾನೆಗಳ ಅಧ್ಯಕ್ಷರು/ ವ್ಯವಸ್ಥಾಪಕ ನಿರ್ದೇಶಕರು/ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು/ ಪ್ರಧಾನ ವ್ಯವಸ್ಥಾಪಕರುಗಳು.

**ಪ್ರತಿಯನ್ನು:**

1. ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

2. ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

3. ಜಿಲ್ಲಾಧಿಕಾರಿಗಳು/ ಉಪ ವಿಭಾಗಾಧಿಕಾರಿಗಳು/ ತಹಸಿಲ್ದಾರ್‌ಗಳು/ ಜಂಟಿ ಕೃಷಿ ನಿರ್ದೇಶಕರು/ ಉಪ ಕೃಷಿ ನಿರ್ದೇಶಕರು/ ಜಂಟಿ ನಿರ್ದೇಶಕರು/ ಉಪ ನಿರ್ದೇಶಕರು/ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಬೆಳಗಾವಿ / ಬಾಗಲಕೋಟೆ / ಬೀದರ್ / ಬಳ್ಳಾರಿ / ಹಾವೇರಿ / ಹಾಸನ / ಚಾಮರಾಜನಗರ / ಮೈಸೂರು / ಮಂಡ್ಯ / ವಿಜಯನಗರ / ದಾವಣಗೆರೆ/ ಗದಗ / ಕಲಬುರಗಿ / ಉತ್ತರ ಕನ್ನಡ / ವಿಜಯಪುರ / ಯಾದಗಿರಿ ಇವರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.